**ದಿನಾಂಕಃ 12.04.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು ಃ ವಾದಿ ಪರ ಶ್ರೀ. ಬಿ.ಎಲ್.ಎನ್ ವಕೀಲರಿಂದಃ -**

ತಿಮ್ಮಕ್ಕ ನನ್ನ ತಾಯಿಯಾಗಬೇಕು. ನಾಗರಾಜ ನನ್ನ ಅಣ್ಣನಾಗಬೇಕು. 4 ನೇ ಪ್ರತಿವಾದಿ ನರಸಣ್ಣ ನನ್ನ ಸಂಬಂಧಿಕರಲ್ಲ. ನಾನು ನನ್ನ ತಾಯಿ ಮತ್ತು ಅಣ್ಣನವರ ನಿ.ಡಿ.1 ಜಿಪಿಎಯನ್ನು ಪಡೆದುಕೊಂಡಿರುತ್ತೇನೆ. 1990 ರಲ್ಲಿ ಜಿಪಿಎಯನ್ನು ಮಾಡಿರುತ್ತಾರೆ. ಜಿಪಿಎಯಲ್ಲಿ ಪ್ರಕರಣವನ್ನು ನಡೆಸುವ ಸಲುವಾಗಿ ನೀಡಿದ್ದೇವೆಂದು ನಮೂದಿಸಿರುತ್ತಾರೆ. ಈ ಜಿಪಿಎಯನ್ನು ನೀಡುವಾಗ ಪ್ರಸ್ತುತ ಈ ದಾವೆಯು ಚಾಲ್ತಿಯಲ್ಲಿ ಇರಲಿಲ್ಲ. ಈ ಜಿಪಿಎಯಲ್ಲಿ ಪ್ರಸ್ತುತ ದಾವೆಯ ನಂಬರನ್ನು ತೋರಿಸಿರುವುದಿಲ್ಲ ಆದರೆ ಈ ದಾವೆಯ ಸಂಪೂರ್ಣ ಸ್ವತ್ತಿನ ಬಗ್ಗೆ ದಾವೆಗಳನ್ನು ನಡೆಸಲು ಜಿಪಿಎಯನ್ನು ನೀಡಿರುತ್ತಾರೆ. ಜಿಪಿಎಯಲ್ಲಿ ಒ.ಎಸ್. ನಂ.616/1984 ರ ಮೂಲ ದಾವಾ ಸಂಖ್ಯೆಯನ್ನು ನಮೂದಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದಲ್ಲದೆ ಸಂಪೂರ್ಣ ಸ್ವತ್ತಿನ ಬಗ್ಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಜಿಪಿಎ ನಿ.ಡಿ.1 ರ ಪ್ರಕಾರ ನನಗೆ ಈ ದಾವೆಯಲ್ಲಿ ಪ್ರತಿವಾದಿಗಳನ್ನು ಪ್ರತಿನಿಧಿಸಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ನನಗೆ ಪುಟ್ಟರಂಗಮ್ಮನ ಬಗ್ಗೆ ತಿಳಿದಿತ್ತು. ಆದರೆ ಅವರು ಮೃತಪಟ್ಟಿರುತ್ತಾರೆ. ಅವರು ನನಗೆ ಸಂಬಂಧಿಕರಲ್ಲ. ಪುಟ್ಟರಂಗಮ್ಮನವರು 1964 ನೇ ಇಸವಿಯಲ್ಲಿ ಒ.ಎಸ್. ನಂ.452/1964 ರ ಪ್ರಕಾರ ಒಂದು ದಾವೆಯನ್ನು ಸಲ್ಲಿಸಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆ ದಾವೆಯು ಪುಟ್ಟರಂಗಮ್ಮ ಮತ್ತು ತಿಮ್ಮಕ್ಕನವರ ನಡುವೆ ರಾಜಿಯಾಗಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಸಾಣೇಗುರುವನಹಳ್ಳಿಯ ಸರ್ವೇ ನಂ.66/1 ಎ-2 ಮೇಲಿನ ರಾಜಿಯಂತೆ ಪುಟ್ಟರಂಗಮ್ಮನವರ ಪಾಲಿಗೆ ಬಂದಿತ್ತು ಎಂದರೆ ಸರಿಯಲ್ಲ. ಈ ರಾಜಿಯಂತೆ ಪುಟ್ಟರಂಗಮ್ಮನವರಿಗೆ ಸಾಣೇಗುರುವನಹಳ್ಳಿಯ ಸರ್ವೇ ನಂ.66/1 ಎ-2 ಮೇಲೆ ಸಂಪೂರ್ಣ ಅಧಿಕಾರವಿತ್ತು ಎಂದರೆ ಸರಿಯಲ್ಲ. ಆ ದಾವೆಯ ಬಗ್ಗೆ ನನಗೇನು ಗೊತ್ತಿಲ್ಲ. ಆ ರಾಜಿಯಂತೆ ಪುಟ್ಟರಂಗಮ್ಮನವರು ಅವರ ಪಾಲಿಗೆ

ಬಂದಿದ್ದ ಸರ್ವೇ ನಂ.66/1 ಎ-2 ನಲ್ಲಿರುವ ವಾದ ಪತ್ರದ ಸ್ವತ್ತನ್ನು ವಾದಿಯವರಿಗೆ 1982 ರಲ್ಲಿ ಕ್ರಯ ಪತ್ರ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪುಟ್ಟರಂಗಮ್ಮನವರು ಸತ್ಯನಾರಾಯಣ ಪನ್ನಾರಿರವರಿಗೆ 08.05.1981 ರ ಜಿಪಿಎಯನ್ನು ನೀಡಿ 1982 ರಲ್ಲಿ ವಾದಿಯವರಿಗೆ ಮೇಲಿನ ಸರ್ವೇ ನಂಬರಿನ ಸ್ವತ್ತನ್ನು ಕ್ರಯ ಪತ್ರ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಕ್ರಯ ಪತ್ರದ ಮೇಲೆ ತಿದ್ದುಪಡಿ ಪತ್ರವೂ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಕ್ರಯ ಪತ್ರ ಆದ ದಿನದಿಂದ ವಾದಿಯವರೇ ಸರ್ವೇ ನಂ.66/1 ಎ-2 ನಲ್ಲಿರುವ ವಾದ ಪತ್ರದ ಸ್ವತ್ತಿನ ಸ್ವಾಧೀನಾನುಭೋಗದಲ್ಲಿದ್ದರು ಎಂದರೆ ಸರಿಯಲ್ಲ. ಕ್ರಯ ಪತ್ರ ಆದಾಗಿನಿಂದಲೂ ವಾದಿಯವರೇ ವಾದ ಪತ್ರದ ಸ್ವತ್ತಿಗೆ ಕಂದಾಯವನ್ನು ಕಟ್ಟಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಬಗ್ಗೆ ನಾವು ಮೇಲ್ಮನವಿ ಸಲ್ಲಿಸಿರುತ್ತೇವೆ. ವಾದ ಪತ್ರದ ಸ್ವತ್ತಿಗೆ ಯಾವುದೇ ಖಾತೆ ಕಂದಾಯ ಆಗಿಲ್ಲ ಎಂದು ನುಡಿಯುತ್ತಾರೆ.

1984 ರಲ್ಲಿ ನಾನು ಒಂದು ಮೂಲ ದಾವಾ ಸಂಖ್ಯೆ 616/1984 ರಂತೆ ಘೋಷಣೆ ಮತ್ತು ಖಾಯಂ ಮುನಾಯಿಯನ್ನು ಕೋರಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಆ ದಾವೆಯು ವಜಾವಾಗಿರುತ್ತದೆ. ಆ ಬಗ್ಗೆ ನಾವು ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ. ಈ ದಾವೆಯಲ್ಲಿ ಸತ್ಯನಾರಾಯಣ ಪನ್ನಾರಿರವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇವೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಸತ್ಯನಾರಾಯಣ ಪನ್ನಾರಿರವರನ್ನಾಗಲೀ ಮಹೇಶ್ ಕುಮಾರ್ ಪನ್ನಾರಿರವರನ್ನಾಗಲೀ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸತ್ಯನಾರಾಯಣ ಪನ್ನಾರಿರವರನ್ನು ಮಾಡಿದ್ದೇವೆ ಎಂದು ನುಡಿಯುತ್ತಾರೆ. ಈ ದಾವೆಯ ವಾದ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನಾನು ಈ ದಾವೆಯನ್ನು ಮೇಲ್ಮನವಿ ಮೂಲಕ ವಜಾವಾದ ಬಗ್ಗೆ ಪ್ರಶ್ನಿಸಿದ್ದು ಅದರಲ್ಲಿಯೂ ಸಹ ಸತ್ಯನಾರಾಯಣ ಪನ್ನಾರಿರವರನ್ನಾಗಲೀ ಮಹೇಶ್ ಕುಮಾರ್ ಪನ್ನಾರಿರವರನ್ನಾಗಲೀ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸತ್ಯನಾರಾಯಣ

ಪನ್ನಾರಿರವರನ್ನು ಮಾಡಿದ್ದೇವೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿ.ಡಿ.2 ನ್ನು ತೋರಿಸಲಾಗಿ ಇದರಲ್ಲಿ ಅವರನ್ನು ಎಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೀರಿ ಎಂದು ತೋರಿಸಲು ಕೇಳಲಾಗಿ ಸಾಕ್ಷಿಯು ಅದರಲ್ಲಿ 16 ನೇ ಎದುರುದಾರರನ್ನಾಗಿ ಮಾಡಿದ್ದೇನೆ ಅದರಲ್ಲಿ ಪನ್ನಾರಿ ಎಂಬ ಪದ ಬಿಟ್ಟು ಹೋಗಿದ್ದು ಉಳಿದ ಎಲ್ಲವೂ ಸರಿಯಾಗಿದೆ ಎಂದು ನುಡಿಯುತ್ತಾರೆ. 16 ನೇ ಎದುರುದಾರರೇ ಬೇರೆ ಮತ್ತು ಸತ್ಯನಾರಾಯಣ ಪನ್ನಾರಿ ಎಂಬ ವ್ಯಕ್ತಿಯೇ ಬೇರೆ ಎಂದರೆ ಸರಿಯಲ್ಲ.

ಆರ್.ಎಫ್.ಎ. ನಂ.1227/2002 ರಲ್ಲಿ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಇದರಲ್ಲಿ ಎಲ್ಲಾ ಪಕ್ಷಗಾರರು ಸಹ ಒಪ್ಪಿಯೇ ರಾಜಿಯಾಗಿರುತ್ತದೆಯೇ ಎಂದರೆ ಸಾಕ್ಷಿ 4 ನೇ ಎದುರುದಾರರ ಜೊತೆ ಮಾತ್ರ ನಾನು ರಾಜಿ ಮಾಡಿಕೊಂಡಿರುತ್ತೇನೆ. ಸತ್ಯನಾರಾಯಣ ಮತ್ತು ಜೂಲಿ ರಾಧಾಕೃಷ್ಣರವರು ಯಾವುದೇ ಜಿಪಿಎ ನೀಡಿಲ್ಲ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ.

(ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ನೀಡಿ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸರಿ ಇದೆ,

(ಮಮ್ತಾಜ್)
9 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.